POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 23.11.2025

# ಚಿತ್ರಹಿಂಸೆ ದೂರು ಕೊಟ್ಟ ಹೀರೋಯಿನ್! ಲಿವ್ ಇನ್ ಇದ್ದ ನಿರ್ಮಾಪಕನ ವರ್ಷನ್ ಏನು?

ಅರವಿಂದ್ ರೆಡ್ಡಿ ಮಹಾರಾಜ ಬಳ್ಳಾರಿ ಟಸ್ಕರ್ಸ್ ಕ್ರಿಕೆಟ್ ತಂಡದ ಮಾಲೀಕ. ಸಿನಿಮಾ ಪ್ರೊಡ್ಯೂಸರ್ ಕೂಡಾ ಹೌದು. ಚಲನಚಿತ್ರ ನಟ, ನಟಿಯರಿಗಾಗಿಯೇ ಹಲವು ಕ್ರಿಕೆಟ್ ಪಂದ್ಯಾವಳಿ ಕೂಡ ಆಯೋಜಿಸಿದ್ದ. ಅರವಿಂದ್ ರೆಡ್ಡಿ ಒಡೆತನದ ಎವಿಆರ್ ಗ್ರೂಪ್ ದುಬೈ, ಶ್ರೀಲಂಕಾ ಸೇರಿದಂತೆ ಹಲವು ಕಡೆ ನಡೆದ ಟೂರ್ನಮೆಂಟ್‌ಗೆ ಸ್ಪಾನ್ಸರ್ ಮಾಡಿತ್ತು.



ಬಿಗ್ ಬಾಸ್ ಮಾಜಿ ಸ್ಪರ್ಧಿಯೂ ಆಗಿರುವ, 8 ಕನ್ನಡ ಚಲನಚಿತ್ರಗಳಲ್ಲಿ ನಾಯಕಿಯಾಗಿರುವ ನಟಿ, ಈತನ ವಿರುದ್ಧ ಕಿರುಕುಳದ ದೂರು ಕೊಟ್ಟಿದ್ದಾರೆ.

ಆಕೆಯು ದೂರನ್ನು ಕೇಳಿದ ಮೇಲೆ... ನಿರ್ಮಾಪಕನ ವರ್ಷನ್ ಕೂಡಾ ತಿಳಿದುಕೊಳ್ಳಬೇಕಲ್ವೇ. ಆ ನಟಿ ನನಗೆ ಗೊತ್ತು. ಆಕೆಗಾಗಿ ನಾನು 3 ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇನೆ. ಆಕೆಯ ಜೊತೆ ಆತ್ಮೀಯತೆ ಇದ್ದಿದ್ದು ನಿಜ. ಆದರೆ... ಹುಡುಗ ಮನೆಗೆ ಬಂದು ಹೋಗೋದು ಗೊತ್ತಾಯ್ತು. ಅದನ್ನ ಕೇಳಿದಾಗ ನಾವಿಬ್ಬರೂ ದೂರ ಆದೆವು. 2023ರಲ್ಲಿ ಶ್ರೀಲಂಕಾದ ಟೂರ್ನಮೆಂಟ್‌ನಲ್ಲಿ ಪರಿಚಯವಾದೆವು. ನಂತರ ನನಗೆ ನನ್ನ ಸ್ನೇಹಿತರಿಗೆ ಹತ್ತಿರವಾದರು. ಬಳಿಕ ಲಿವ್ ಇನ್ ರಿಲೇಷನ್ ಶಿಪ್ ಸ್ಟಾರ್ಟ್ ಆಯ್ತು.

ಇವರು ಒಬ್ಬ ಹುಡುಗನ ಜೊತೆ ತಾಂಜೇನಿಯಾ ಟ್ರಿಪ್ ಹೋಗಿದ್ರು. ಬಳಿಕ ಹುಡುಗ ಮನೆಗೆ ಇವಳ ಮನೆಗೆ ಬಂದು ಹೋಗೋದು ಗೊತ್ತಾಯ್ತು. ಅದನ್ನ ಕೇಳಿದಾಗ ನಾವಿಬ್ಬರೂ ದೂರ ಆದೆವು. ಅವಳಿಗಾಗಿ 3 ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇನೆ. ಫ್ಲ್ಯಾಟ್ ಕೊಡಿಸಿದ್ದೇನೆ. ಪೋರ್ಷೆ ಕಾರು ಕೊಡಿಸಿದ್ದೇನೆ. ಅವಳ ತಮ್ಮನ ಮನೆ ಗೃಹಪ್ರವೇಶಕ್ಕೂ ಸಹಾಯ ಮಾಡಿದ್ದೆ. ಹೀಗಿದ್ದರೂ ಅವಳು ನನ್ನ ಬಿಟ್ಟು ಬೇರೆ ವ್ಯಕ್ತಿ ಜೊತೆಗೆ ಕಾಣಿಕೊಳ್ಳುತ್ತಿದ್ದಳು. ನಾನು ಯಾವುದೇ ಕಿರುಕುಳ ನೀಡಿಲ್ಲ, ಅವಳೇ ನನಗೆ ಮೋಸ ಮಾಡಿದ್ದಾಳೆ ಎನ್ನುವುದು ನಿರ್ಮಾಪಕ ಅರವಿಂದ್ ರೆಡ್ಡಿ ವಾದ.

'ಇಸವಿ 2024ರಲ್ಲಿ ಅವರ ಫೋಟೋಗಳನ್ನ ತಪ್ಪಾಗಿ ಅರ್ಥ ಬರುವಂತೆ ಪೋಸ್ಟ್ ಮಾಡಿದ್ದೀನಿ ಅಂತ ಆರೋಪ ಮಾಡಿದ್ರು. ಅದಕ್ಕೂ ನನಗೂ ಸಂಬಂಧ ಇರಲಿಲ್ಲ. ಅವಳ ಫ್ಯಾನ್ಸ್ ಗ್ರೂಪ್‌ನವರೇ ಮಾಡಿದ್ದರು. ಇನ್ನು ಅವರ ಮನೆ ಓನರ್‌ಗೆ ಫೋಟೋ ಶೇರ್ ಮಾಡಿದ್ದೀನಿ ಎಂದು ಆರೋಪಿಸಿದ್ದಾರೆ. ಅದೂ ನನಗೆ ಗೊತ್ತಿರಲಿಲ್ಲ. ಬಿಸಿನೆಸ್ ಮೇಲೆ ಹೋಗಿದ್ದಾಗ ನೋಟಿಸ್ ಕೊಟ್ಟಿದ್ದಾರೆ. ವಾಪಸ್ ಬರುತ್ತಿದ್ದಂತೆ ಅರೆಸ್ಟ್ ಮಾಡಿದ್ದಾರೆ. ಯಾರು ಲೆಟರ್, ಫೋಟೋ ಕಳಿಸಿದ್ದಾರೆ ನನಗಂತೂ ಗೊತ್ತಿಲ್ಲ. ದುಬೈ ಸೈಮಾಗೆ ತಾಂಜೇನಿಯಾಗೆ ಹೋಗಲು ಸ್ಪಾನ್ಸರ್ ಮಾಡಿ ಕಳಿಸಿದ್ದೆ. ಅವರಿಗೆ ನನ್ನ ಪಾರ್ಟನರ್ ಆಗಿ ಏನು ಮಾಡಬೇಕು ಮಾಡ್ತಿದ್ದೆ. ಆದ್ರೆ ಆ ಹುಡುಗ ಜೊತೆ ರೆಗ್ಯೂಲರ್ ಇಂಟರಾಕ್ಟ್ ಮಾಡ್ತಿದ್ರು ಅನ್ನೋದು ಅರವಿಂದ್ ರೆಡ್ಡಿ ಪ್ರತ್ಯಾರೋಪ.




ಇವರಿಬ್ಬರ ವಾದ ಕೇಳಿದಾಗ ಅನಿಸೋದು ಇಷ್ಟು. ಆ ನಾಯಕಿ ಮತ್ತು ಈ ನಿರ್ಮಾಪಕರ ಮಧ್ಯೆ ಲಿವ್ ಇನ್... ಸಂಬಂಧ ಇದ್ದದ್ದು ಹೌದು. ಚೆನ್ನಾಗಿ ಇದ್ದಾಗ ಚೆನ್ನಾಗಿಯೇ ಇದ್ದ ಇಬ್ಬರೂ ಇದೀಗ ಮನಸ್ಸು ಕೆಡಿಸಿಕೊಂಡು ದೂರವಾಗಿರೋದು ಹೌದು. ಇಷ್ಟಕ್ಕೂ ಮನಸ್ಸು ಕೆಟ್ಟಿದ್ದು ಏಕೆ?ಅದಕ್ಕೆ ಆ ನಟಿಯ ಲೈಫಿನಲ್ಲಿ ಬಂದ ಇನ್ನೊಬ್ಬ ಹುಡುಗ ಕಾರಣವೋ... ಅಥವಾ ನಿರ್ಮಾಪಕ ಅರವಿಂದ ರೆಡ್ಡಿಯು 'ಎಣ್ಣೆ ಏಟು' ಕಾರಣವೋ...?!

☯

# ಮೆಡಿಕಲ್ ಕ್ಲಿನಿಕಲ್ ಟ್ರಯಲ್ ಮಾಫಿಯಾ ವೈರಲ್ ಇನ್ 'ದಿ ಟಾಸ್ಕ್'!

2019-2020ರಲ್ಲಿ ಜಗತ್ತನ್ನೇ ಅಲುಗಾಡಿಸಿದ 'ಕೋವಿಡ್' ಅನ್ನೋ ಮಹಾಮಾರಿ ಅದೆಷ್ಟೋ ಜನರ ಪ್ರಾಣ ಬಲಿ ತೆಗೆದುಕೊಂಡಿತು. ನಾವು ಬದುಕಿದ್ದಾಗಲೇ ನರಕ ತೋರಿಸಿತ್ತು. ಆಗ ಕೋವಿಡ್ ಲಸಿಕೆ ಕಂಡು ಹಿಡಿದು ತರಾತುರಿಯಲ್ಲಿ ಜನರ ಮೇಲೆ ನೇರವಾಗಿ ಪ್ರಯೋಗ ಮಾಡಲಾಗಿತ್ತು. ಕಾನೂನು ಮತ್ತು ಶಿಷ್ಟಾಚಾರದ ಪ್ರಕಾರ, ಕಂಡು ಹಿಡಿದ ಲಸಿಕೆಯನ್ನು ಇಲಿ, ಮೊಲ, ಹಂದಿ, ಮಂಗ ಮುಂತಾದ ಪ್ರಾಣಿಗಳ ಮೇಲೆ ಮೊದಲು ಪ್ರಯೋಗ ಮಾಡಿ ಅದು ಸಕ್ಸಸ್ ಆದಮೇಲೆ ಮನುಷ್ಯನಿಗೆ ನೀಡಬೇಕು! ಈ ಎಲ್ಲಾ ಪಕ್ರಿಯೆಗೆ ಸುಮಾರು ಎರಡು ವರ್ಷ ಬೇಕಾಗಬಹುದು. ಆದರೆ ಆಗಿನ ಪರಿಸ್ಥಿತಿಯಲ್ಲಿ ಇದಕ್ಕೆಲ್ಲಾ ಸಮಯವಿರಲಿಲ್ಲ.




ಅದೇ ರೀತಿ ಕೋವಿಡ್ ಮುಗಿದ ಮೇಲೆ ಲಸಿಕೆಯಿಂದ ಮನುಷ್ಯರಿಗೆ ಆಗುವ ದುಷ್ಪರಿಣಾಮಕ್ಕೆ ಮತ್ತೊಂದು ಲಸಿಕೆಯನ್ನು ಒಬ್ಬ ಮೆಡಿಕಲ್ ಮಾಫಿಯಾದ 'ಡಾನ್' ತನ್ನ ಸಂಜೀವಿನಿ ಸಂಸ್ಥೆಯ ಮೂಲಕ ಹೊಸದಾಗಿ ಕಾನೂನು ಬಾಹಿರವಾಗಿ 'ವ್ಯಾಕ್ಸಿನ್' ತಯಾರಿಸುತ್ತಾರೆ. ಅದನ್ನು ನೇರವಾಗಿ ಮನುಷ್ಯರ ಮೇಲೆ ಪ್ರಯೋಗ ಮಾಡಿ ಅದರಿಂದ ದೊಡ್ಡ ಅನಾಹುತ ಆಗುತ್ತದೆ.ಅದನ್ನು ನೋಡಿದವನ ಕೊಲೆಯಾಗುತ್ತದೆ! ಮತ್ತು ಅದನ್ನ ಆತ್ಮಹತ್ಯೆ ಅಂತ ಬಿಂಬಿಸಲಾಗುತ್ತದೆ. ಆದರೆ ಆ ಕೊಲೆಯನ್ನು ಹತ್ತನೇ ತರಗತಿ ಓದುವ ಒಂದು ಹುಡುಗಿ ನೋಡಿರುತ್ತಾಳೆ! ಆ ಹುಡುಗಿ ತಾನು ನೋಡಿದ್ದನ್ನು ತನ್ನ ಅಪ್ಪ, ಅಮ್ಮನಿಗೆ ಹೇಳುತ್ತಾಳೆ. ಭಯ ಭೀತಿಯಿಂದ ಅವರು ಆಕೆಯ ಬಾಯಿ ಮುಚ್ಚಿಸುತ್ತಾರೆ. ಆದರೆ ಆ ಹುಡುಗಿ ಸೋಷಿಯಲ್ ಮೀಡಿಯಾ ಮೂಲಕ ಒಬ್ಬ ಪ್ರಾಮಾಣಿಕ ಲಾಯರ್ ಅನ್ನು (ಸಂಗೀತ ಭಟ್) ಸಂಪರ್ಕಿಸಿ ವಿಷಯ ತಿಳಿಸುತ್ತಾಳೆ. ಆಗ ಮುಂದೆ ಆ ಹುಡುಗಿ ಬೆಂಗಳೂರಿಗೆ ಬಂದು ಸಾಕ್ಷಿ ಹೇಳಬೇಕಾಗುತ್ತದೆ. ಇಲ್ಲಿಂದ ಶುರುವಾಗುತ್ತದೆ ಅಸಲಿ ಸ್ಟೋರಿ!

ಆ ಹುಡುಗಿಯನ್ನು ಅವಳ ಹೆತ್ತವರ ಕಣ್ತಪ್ಪಿಸಿ ಬೆಂಗಳೂರಿಗೆ ಕರೆತರುವುದೇ ಅಸಲಿ ಟಾಸ್ಕ್!! ಇಬ್ಬರು ಯುವಕರಿಗೆ ಈ ಟಾಸ್ಕ್ ಕೊಡುವುದು ಓರ್ವ ನಿವೃತ್ತ ಪೋಲಿಸ್ ಅಧಿಕಾರಿ ರಾಜೇಶ್ (ಅಚ್ಯುತ್). ಅವರಿಬ್ಬರು ಮೀಸೆ ಮೂಡದ ಹದಿ ಹರೆಯದ ಹುಡುಗರು. ಹಾಸ್ಟಲ್ ನಲ್ಲಿ ವಾರ್ಡನ್ ಕಿರುಕುಳಕ್ಕೆ ತಿರುಗಿ ಬಿದ್ದು ಕೊಲೆ ಮಾಡಿ ಜೈಲು ಸೇರಿದವರು. ಅಲ್ಲಿಂದ ಅಚ್ಯುತ್ ಕುಮಾರ್ ಸಹಾಯದಿಂದ ಒಳ್ಳೆಯ ದಾರಿಯಲ್ಲಿ ನಡೆದು ನ್ಯಾಯಕ್ಕಾಗಿ ಹೋರಾಡುವ ಮನಸ್ಸಿನ ಹುಡುಗರಾಗಿ ಒಳ್ಳೆ ಜೀವನ ನಡೆಸುತ್ತಾರೆ. ಇಲ್ಲಿ ಆ ಹುಡುಗಿಯನ್ನು ಕಿಡ್ನ್ಯಾಪ್ ಮಾಡುವುದೇ ಒಂದು ರೋಚಕವಾಗಿದೆ.

ನಾಯಕ ನಟರಾದ ಜಯಸೂರ್ಯ ಮತ್ತು ಸಾಗರ್ ರಾಮ್ ಮೊದಲ ಬಾರಿಗೆ ಪೂರ್ಣ ಪ್ರಮಾಣದ ನಾಯಕ ನಟರಾಗಿ ಬಣ್ಣ ಹಚ್ಚಿದ್ದು, ಆಕ್ಷನ್ ಹೀರೋಗಳಾಗಿ ಮಿಂಚಿದ್ದಾರೆ. ಇಲ್ಲಿ ನಾಯಕ ನಟರುಗಳಿಗಿಂತ ಖಳ ನಟನಾಗಿ ಸುಂಟಿಕೊಪ್ಪದ ಲೋಕಲ್ ರೌಡಿಯಾಗಿ, ಭಯಂಕರವಾಗಿ ನಟಿಸಿರುವುದು ನಿರ್ದೇಶಕ ರಾಘು ಶಿವಮೊಗ್ಗ. ದುಷ್ಟ, ಅತ್ಯಾಚಾರಿ, ಸುಫಾರಿ ಕೊಲೆಗಾರ ಭರಮಪ್ಪನ ಪಾತ್ರದಲ್ಲಿ ರಾಘು ಶಿವಮೊಗ್ಗ ಅಕ್ಷರಶ ಜೀವಿಸಿಸಿದ್ದಾರೆ. ಇಡೀ ಚಿತ್ರದ ಹೈಲೈಟ್ ಈ ಪಾತ್ರ ಎನ್ನಬಹುದು. ಇನ್ನು, ದಕ್ಷ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಅಚ್ಯುತ್ ಕುಮಾರ್ ಕೂಡ ಅದ್ಭುತವಾಗಿ ನಟಿಸಿದ್ದಾರೆ. ಉಳಿದಂತೆ ಬೇಬಿ ಶ್ರೇಯಾ, ಸಂಗೀತಾ ಭಟ್, ಗೋಪಾಲ ಸರದೇಶಪಾಂಡೆ, ಹರಿಣಿ ಅಭಿನಯ ತೂಕವಾಗಿದೆ. ಒಟ್ಟಾರೆ, ಈ ವರ್ಷ ಸ್ಯಾಂಡಲ್ ವುಡ್ ನಲ್ಲಿ ಬಂದಿರೋ ಒಂದು ಅಪರೂಪದ ಕ್ರೈಂ ಥ್ರಿಲ್ಲರ್ 'ದಿ ಟಾಸ್ಕ್'. ಡೋಂಟ್ ಮಿಸ್!

☯

# ಕನ್ನಡ ಚಿತ್ರರಂಗ ಈ ಪರಿಯಕ್ಕುಟ್ಟಿ ಹೋದದ್ದೇಕೆ?

ಚಂದನವನ, ಗಾಂಧಿನಗರ, ಸ್ಯಾಂಡಲ್ ವುಡ್.... ಇದೆಲ್ಲಾ ಬಾಯಲ್ಲಿ ಹೇಳೋಕಷ್ಟೇ ಚಂದ. ನಾಮ್ ಕಾವಸ್ಥೆ ಗಷ್ಟೇ ಇದು ನಮ್ಮದು.. ಕನ್ನಡಿಗರದ್ದು. ಆದರಿಲ್ಲಿ ನಡೆಯೋದೆಲ್ಲ ಪರ ಭಾಷಿಕರ ಆಟ! ಇಲ್ಲಿ ಬಿಸಿನೆಸ್ ಮಾಡ್ತಿರೋ ಬಲಾಡ್ಯರು ಬಹುತೇಕ ಹೊರಗಿನವರು. ಹೊಂಬಾಳೆ ಫಿಲಂಸ್ ನವರೊಬ್ಬರನ್ನು ಬಿಟ್ರೆ ಉಳಿದವರು, ಸಣ್ಣ ಪುಟ್ಟ ನಿರ್ಮಾಪಕರು, ಹೊಸ ನಟರು ಇಲ್ಲಿ ಬದುಕುವುದೇ ದುಸ್ತರವಾಗಿದೆ.... ಅಲ್ರಿ, ಇದು ಕನ್ನಡ ನಾಡು. ಹೊಸಬರು ಆಸೆ ಆಕಾಂಕ್ಷೆ ಇಟ್ಟುಕೊಂಡು ಸಿನಿಮಾ ಮಾಡುತ್ತಾರೆ. ಆದರೆ, ನಮಗೆ ಚಿತ್ರಮಂದಿರ ಸಿಗುವುದಿಲ್ಲ! ಪರ ಭಾಷೆಯ ಸಿನಿಮಾಗಳಿಗೆ ನೂರಾರು ಸಂಖ್ಯೆಯಲ್ಲಿ ಸಿಗುತ್ತವೆ! ತಮಿಳು ತೆಲುಗಿನ ಹಳೆಯ ಸಿನಿಮಾ ರೀರಿಲೀಸ್ ಆದ್ರೂ ಇಲ್ಲಿ ನೂರಾರು ಚಿತ್ರಮಂದಿರ ಸಿಗುತ್ತವೆ. ಅದೇ ಇಲ್ಲಿನ ಕನ್ನಡ ಸಿನಿಮಾಗೆ ಎಲ್ಲೋ ಒಂದು ಕಡೆ ಮಾರ್ನಿಂಗ್ ಶೋ ಅಥವಾ ರಾತ್ರಿ ಒಂದು ಆಟ ಪ್ರದರ್ಶನಕ್ಕೆ ಅವಕಾಶ ಕೊಡುತ್ತಾರೆ!! ಇದೆಂಥ ಅನ್ಯಾಯ?

ಕಳೆದ ಶುಕ್ರವಾರ ಕನ್ನಡದ ಆರು ಸಿನಿಮಾಗಳು ರಿಲೀಸ್ ಆದವು. ಯಾವುದಕ್ಕೂ ಗರಿಷ್ಟ ಚಿತ್ರಮಂದಿರ ಸಿಕ್ಕಿಲ್ಲ. ದುನಿಯಾ ವಿಜಿ ಒಬ್ಬರ ಚಿತ್ರ ಬಿಟ್ಟು ಉಳಿದೆಲ್ಲರ ಪಾಡು ಹೇಳ ತೀರದು. ಹಿಂದೆಲ್ಲ ಕೆ.ಜಿ. ರೋಡ್‌ನ ಯಾವುದಾದರೊಂದು ಪ್ರತಿಷ್ಠಿತ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡುವ ಹವ್ಯಾಸವಿತ್ತು. ಅದರೀಗ ಎಲ್ಲಿ ಸಿಗುತ್ತೋ ಅಲ್ಲಿ... ರಿಲೀಸ್ ಮಾಡಿದ್ರೆ ಸಾಕಪ್ಪ ಅನ್ನೋ ಪರಿಸ್ಥಿತಿ... ಎಲ್ಲೋ ಒಂದು ಮೂಲೆಯಲ್ಲಿ ಒಂದೋ ಎರಡೋ ಪ್ರದರ್ಶನಕ್ಕೆ ಚಾನ್ಸ್ ಸಿಕ್ಕಿ ಕನ್ನಡದ ಆರು ಸಿನಿಮಾ ರಿಲೀಸ್ ಆದವಲ್ಲ,ಅಂದೇ ತೆಲುಗಿನ ಹಳೇ ಸಿನಿಮಾ 'ಕೊದಮ ಸಿಂಹಂ', ತಮಿಳಿನ 'ಫ್ರೆಂಡ್ಸ್' ರೀ ರಿಲೀಸ್ ಆದವು! ಅವಕ್ಕೆ ಸಿಕ್ಕ ಚಿತ್ರಮಂದಿರ ಗಳೆಷ್ಟು? ನೂರಿನ್ನೂರು! ಅವನ್ನೇ ಕನ್ನಡ ಸಿನಿಮಾಗಳಿಗೆ ಕೊಡುವುದಕ್ಕೆ ಅಗುತ್ತಿರಲಿಲ್ವ? ಇಷ್ಟಕ್ಕೂ ಆರು ಚಿತ್ರಗಳು ಬಿಡುಗಡೆ ಆಗುತ್ತಿದ್ದಾಗ ಈ ಪರ ಭಾಷೆಯ ಹಳೇ ಸಿನಿಮಾಗಳನ್ನ ಅವತ್ತೇ ಬಿಡುಗಡೆ ಮಾಡುವುದೇನಿತ್ತು? ಒಟ್ಟಾರೆ, ಕನ್ನಡ ನೆಲದಲ್ಲೇ ಕನ್ನಡ ಸಿನಿಮಾಗಳ ಕೊಲೆ ಆಗುತ್ತಿದೆ! ಸೋ ಕಾಲ್ಡ್ ಕನ್ನಡ ಕಂಠೀರವರು,ಕನ್ನಡ ಕಲಿಗಳು, ಹೋರಾಟಗಾರರು, ಕರುನಾಡು ಅಭಿನವ ಚಕ್ರವರ್ತಿಳೆಲ್ಲ ಏನು ಮಾಡ್ತಿದ್ದಾರೆ?? ನೀವು ಬದುಕಿದರೆ ಸಾಕೆ??? ರಾಜ್ ಕುಮಾರ್, ವಿಷ್ಣುವರ್ಧನ್, ಅಂಬರೀಷ್ ಅವರು ಬದುಕಿದ್ದಾಗ ಈಗೆಲ್ಲ ಪರಿಸ್ಥಿತಿ ಇತ್ತೇ... ಛೇ...

☯

Vol. 41 No. 25 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==